**ಕರ್ನಾಟಕಸರ್ಕಾರ**

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ:DTE-ADMI0EST(10)65/2024

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 03-02-2025

**ಹಿಂಬರಹ**

ಸರ್ಕಾರದ ಆದೇಶ ಸಂಖ್ಯೆ: ಇಡಿ 12 ಡಿಟಿಇ 2025 ದಿನಾಂಕ:24-01-2025 ರ ಆದೇಶದ ಅನುಬಂಧದಲ್ಲಿ ಹೆಸರಿಸಲಾದ ಸರ್ಕಾರಿ ಇಂಜನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರುಗಳಿಗೆ 7ನೇ ಎಐಸಿಟಿಇ ವೇತನಶ್ರೇಣಿ ರೂ.68900-205500 ಲೆವೆಲ್-11 ರಿಂದ ರೂ.79800-211500 ಲೆವೆಲ್-12 ಕ್ಕೆ ಪದೋನ್ನತಿ ನೀಡಿರುವ ಸರ್ಕಾರದ ಆದೇಶವನ್ನು ಸಂಬಂಧಪಟ್ಟ ಅಧ್ಯಾಪಕರುಗಳಿಗೆ ಹಾಗೂ ಪ್ರಾಂಶುಪಾಲರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

Digitally signed by
Prasanna H
Date: 06-02-2025
14:25:45

**ನಿರ್ದೇಶಕರು**
ತಾಂತ್ರಿಕ ಶಿಕ್ಷಣ ಇಲಾಖೆ,

**ಇವರಿಗೆ**:-

1. ಮಹಾಲೇಖಪಾಲರು, ಎ&ಇ, ಬೆಂಗಳೂರು;
2. ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ - ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ;
3. ಸಂಬಂಧಪಟ್ಟ ಅಧ್ಯಾಪಾಕರುಗಳು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ (ಪ್ರಾಂಶುಪಾಲರ ಮುಖಾಂತರ)
4. ನೋಡಲ್ ಅಧಿಕಾರಿ, ಇ-ಆಡಳಿತ, ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು (ವೆಬ್‌ಸೈಟ್‌ನಲ್ಲಿ ಅಳವಡಿಸಲು)

**ಪ್ರತಿ**:-

1. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ(ತಾಂತ್ರಿಕ), ಬಹುಮಹಡಿ ಕಟ್ಟಡ, ಬೆಂಗಳೂರು;
2. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
3. ಆಪ್ತ ಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
4. ಹೆಚ್ಚುವರಿ ಪ್ರತಿ ಕಡತಕ್ಕೆ

1133

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರಿಗೆ 7ನೇ ಎಐಸಿಟಿಇ ವೇತನ ಶ್ರೇಣಿ ರೂ. ರೂ. 68900-205500 ಲೆವೆಲ್-11 ರಿಂದ ರೂ. 79800-211500, ಲೆವೆಲ್-12 ಕ್ಕೆ ಪದೋನ್ನತಿ ನೀಡುವ ಬಗ್ಗೆ.

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂಖ್ಯೆ: ಇಡಿ 12 ಡಿಟಿಇ 2019, ದಿನಾಂಕ: 24.03.2020.
2. ಸರ್ಕಾರದ ಪತ್ರ ಸಂಖ್ಯೆ: ಇಡಿ/86/ಡಿಟಿಇ/2023, ದಿನಾಂಕ: 07.10.2023.
3. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರ ಏಕ ಕಡತ ಸಂಖ್ಯೆ: **DTE-ADMI0EST(10)/65/2024** (1613247).

**ಪ್ರಸ್ತಾವನೆ:-**

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ 7ನೇ ಎಐಸಿಟಿಇ ವೇತನವನ್ನು ದಿನಾಂಕ: 01.01.2016 ರಿಂದ ಅನ್ವಯಿಸುವಂತೆ ವಿಸ್ತರಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಸರ್ಕಾರದ ಪತ್ರದಲ್ಲಿ ಎಐಸಿಟಿಇ ಅಧಿಸೂಚನೆ ಸಂ: F.No. 61-1/RIFD/7thCPC/2016-17, ದಿನಾಂಕ:01.03.2019 ರಲ್ಲಿ ನೇಮಕಾತಿ ಮುಂಬಡ್ತಿಗೆ ನಿಗದಿಪಡಿಸಲಾಗಿರುವ ಎಲ್ಲಾ ನಿಯಮಾವಳಿಗಳನ್ನು ಅಳವಡಿಸಿಕೊಂಡು ಹಾಗೂ ಎಐಸಿಟಿಇ ಮತ್ತು ಯುಜಿಸಿ 2010 ಮತ್ತು 2018ರ ಆದೇಶ ಸಂ:-F.1-2/2017(EC/PS) ದಿನಾಂಕ18.07.2018 UGC REGULATIONS ಮುಂಬಡ್ತಿಗೆ ನಿಗಧಿಪಡಿಸಲಾಗಿರುವ ಎಲ್ಲಾ ಮಾನದಂಡಗಳನ್ನು ಅಳವಡಿಸಿಕೊಂಡು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿಯಲ್ಲಿ ಪದೋನ್ನತಿ ನೀಡುವ ಪ್ರಸ್ತಾವನೆಗಳನ್ನು ಪರಿಶೀಲಿಸಲು ಪ್ರತ್ಯೇಕ ಸ್ಕಾನೀಕರಣ ಸಮಿತಿಯನ್ನು ರಚಿಸುವ ಅಧಿಕಾರವನ್ನು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರಿಗೆ ಪ್ರತ್ಯಾಯೋಜಿಸಲಾಗಿದೆ.

ಮೇಲೆ ಓದಲಾದ (3)ರ ಆಯುಕ್ತರ ಏಕಕಡತದಲ್ಲಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ವಿಷಯ ತಜ್ಞರುಗಳನ್ನೊಳಗೊಂಡ ಸ್ಕಾನೀಕರಣ ಸಮಿತಿಯು ದಿನಾಂಕ:13.11.2024 ರಿಂದ 20.11.2024ರವರೆಗೆ ಸಭೆ ಸೇರಿ ಸರ್ಕಾರಿ ಇಂಜಿನಿಯರಿಂಗ್ 1) ಗ್ರಂಥಾಲಯ ವಿಜ್ಞಾನ ವಿಭಾಗದ 01 ಸಹಾಯಕ ಪ್ರಾಧ್ಯಾಪಕರು, 2) ಆಂಗ್ಲ ಭಾಷೆ ವಿಭಾಗದ 01 ಸಹಾಯಕ ಪ್ರಾಧ್ಯಾಪಕರು, 3) ಗಣಿತ ವಿಭಾಗದ 01 ಸಹಾಯಕ ಪ್ರಾಧ್ಯಾಪಕರು, 4) ಭೂವಿಜ್ಞಾನ ವಿಭಾಗದ 01 ಸಹಾಯಕ ಪ್ರಾಧ್ಯಾಪಕರು, 5) ರಸಾಯನಶಾಸ್ತ್ರ, ವಿಭಾಗದ 02 ಸಹಾಯಕ ಪ್ರಾಧ್ಯಾಪಕರು, 6) ಕಾಮಗಾರಿ ವಿಭಾಗದ 02

...2



File No. DTE-ADMI0EST(10)/65/2024-JD-DEPT TECH EDUCATION (Computer No. 1613247)

Generated from eOffice by PRAMOD T N , EST10, FDA, DEPARTMENT OF TECHNICAL EDUCATION on 06/02/2025 03:30 PM

ಸಹಾಯಕ ಪ್ರಾಧ್ಯಾಪಕರು, 7) ದೈಹಿಕ ಶಿಕ್ಷಣ ವಿಭಾಗದ 01 ಸಹಾಯಕ ಪ್ರಾಧ್ಯಾಪಕರು 8) ಗಣಕಯಂತ್ರ ವಿಭಾಗದ 01 & 9) ಇ & ಸಿ ವಿಭಾಗದ 01 ಸಹಾಯಕ ಪ್ರಾಧ್ಯಾಪಕರುಗಳನ್ನು ಒಳಗೊಂಡಂತೆ ಒಟ್ಟು 11 ಸಹಾಯಕ ಪ್ರಾಧ್ಯಾಪಕರುಗಳು 7ನೇ ಎಐಸಿಟಿಇ ವೇತನ ಶ್ರೇಣಿಯಡಿ ರೂ. 68900-205500 ಲೆವೆಲ್-11 ರಿಂದ ರೂ. 79800-211500, ಲೆವೆಲ್-12 ಕ್ಕೆ ಪದೋನ್ನತಿ ಹೊಂದಲು ನಿಯಮಾನುಸಾರ ಅರ್ಹತೆ ಹೊಂದಿರುವ ಬಗ್ಗೆ ಪರಿಶೀಲಿಸಿ, ಸದರಿಯವರಿಗೆ ಪದೋನ್ನತಿಯನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿರುತ್ತದೆ.

ಅದರಂತೆ, ಒಟ್ಟು 11 ಸಹಾಯಕ ಪ್ರಾಧ್ಯಾಪಕರುಗಳಿಗೆ ಮುಂಬಡ್ತಿಗೆ ಅರ್ಹತೆ ಪಡೆದ ದಿನಾಂಕದಿಂದ 7ನೇ ಎಐಸಿಟಿಇ ವೇತನ ಶ್ರೇಣಿಯಡಿ ರೂ. 68900-205500 ಲೆವೆಲ್-11 ರಿಂದ ರೂ. 79800-211500, ಲೆವೆಲ್ 12 ಕ್ಕೆ ಪದೋನ್ನತಿ ನೀಡುವಂತೆ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರು ಕೋರಿರುತ್ತಾರೆ.

ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಶ್ರೀ ಫಜಲುದ್ದೀನ್ ಡಿ.ಎಂ., ಸಹಾಯಕ ಪ್ರಾಧ್ಯಾಪಕರು ಇವರಿಗೆ ಸರ್ಕಾರದ ಆದೇಶ ಸಂಖ್ಯೆ:ಇಡಿ 111 ಡಿಟಿಇ 2024, ದಿನಾಂಕ:13.08.2024ರಲ್ಲಿನ ಇ&ಸಿ ವಿಭಾಗದ ಕ್ರ.ಸಂ.8 ರಲ್ಲಿ 7ನೇ ಎಐಸಿಟಿಇ ವೇತನ ಶ್ರೇಣಿಯಡಿ ಲೆವೆಲ್ 12 ಕ್ಕೆ ಪದೋನ್ನತಿ ನೀಡಿ ಆದೇಶಿಸಲಾಗಿದೆ. ಸದರಿಯವರನ್ನು ಹೊರತುಪಡಿಸಿ ಇನ್ನುಳಿದ ಒಟ್ಟು 10 ಸಹಾಯಕ ಪ್ರಾಧ್ಯಾಪಕರುಗಳಿಗೆ ರೂ. 68900-205500 ಲೆವೆಲ್-11 ರಿಂದ ರೂ. 79800-211500, ಲೆವೆಲ್-12 ಕ್ಕೆ ಪದೋನ್ನತಿ ನೀಡಲು ಸರ್ಕಾರವು ತೀರ್ಮಾನಿಸಿದ್ದು, ಅದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 12 ಡಿಟಿಇ 2025**

**ಬೆಂಗಳೂರು, ದಿನಾಂಕ: 24ನೇ ಜನವರಿ 2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಆದೇಶದ **ಅನುಬಂಧ** ದಲ್ಲಿರುವ ಒಟ್ಟು 10 ಸಹಾಯಕ ಪ್ರಾಧ್ಯಾಪಕರುಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು, 7 ನೇ ಎಐಸಿಟಿಇ ವೇತನಶ್ರೇಣಿ ರೂ.68900-205500 ಲೆವೆಲ್-11 ರಿಂದ ರೂ. 79800-211500, ಲೆವೆಲ್-12 ಕ್ಕೆ ಪದೋನ್ನತಿ ನೀಡಿ ಆದೇಶಿಸಿದೆ.

**ಷರತ್ತುಗಳು:**

i. 2019 ಮತ್ತು 2020ರ 7ನೇ ಎಐಸಿಟಿಇ ವೇತನ ಶ್ರೇಣಿಗಳಲ್ಲಿನ ಮಂಜೂರಾತಿಯು ಸರ್ಕಾರದ ಮಾರ್ಗಸೂಚಿ/ಆದೇಶಗಳಲ್ಲಿನ ನಿಬಂಧನೆಗೊಳಪಟ್ಟಿರುತ್ತದೆ. ಸದರಿ ವೇತನ ಶ್ರೇಣಿಗಳಲ್ಲಿ ನಿಗದಿಪಡಿಸಿರುವ ಎಲ್ಲಾ ಅಂಶಗಳ ಆಧಾರದ ಮೇಲೆ ಅರ್ಹ ಸಹಾಯಕ ಪ್ರಾಧ್ಯಾಪಕರುಗಳ ಮುಂಬಡ್ತಿ ಮಂಜೂರಾತಿಗೆ ಸಮಿತಿಯು ಮಾಡಿರುವ ಶಿಫಾರಸ್ಸನ್ನು ಆಧರಿಸಿ ಈ ಆದೇಶವನ್ನು ಹೊರಡಿಸಲಾಗಿದೆ.

ii. ಎಐಸಿಟಿಇ/ಯುಜಿಸಿ/ಸರ್ಕಾರ/ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಆದೇಶ/ ಸುತ್ತೋಲೆ/ ಪತ್ರಗಳಲ್ಲಿ ನಿಗದಿಪಡಿಸುವ ಷರತ್ತು/ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

...3

iii. ಅರ್ಹ ಸಹಾಯಕ ಪ್ರಾಧ್ಯಾಪಕರುಗಳು ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಯಾವುದೇ ತಪ್ಪು ಮಾಹಿತಿಗಳನ್ನು ಒದಗಿಸಿರುವುದು ಕಂಡುಬಂದಲ್ಲಿ ಸಂಬಂಧಿಸಿದ ಸಹಾಯಕ ಪ್ರಾಧ್ಯಾಪಕರುಗಳ ವಿವಿಧ ಹಂತದ ಮುಂಬಡ್ತಿ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆ ನೀಡದೇ ಹಿಂಪಡೆಯಲಾಗುವುದು ಹಾಗೂ ತಪ್ಪು ಮಾಹಿತಿ ಒದಗಿಸಿದ ಸಹಾಯಕ ಪ್ರಾಧ್ಯಾಪಕರುಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು.

iv. ಶಿಫಾರಸ್ಸು ಮಾಡಲಾಗಿರುವ ಅನುಬಂಧದಲ್ಲಿರುವ ಸಹಾಯಕ ಪ್ರಾಧ್ಯಾಪಕರುಗಳು ಸಲ್ಲಿಸಲಾಗಿರುವ ದಾಖಲೆಗಳಲ್ಲಿ ವ್ಯತ್ಯಾಸಗಳು, ಅಸಂಗತಗಳು, ಕಂಡುಬಂದಲ್ಲಿ ಮುಂದಿನ ದಿನಗಳಲ್ಲಿ ಅದರ ಸಾಧಕ-ಬಾಧಕಗಳಿಗೆ ಸಂಪೂರ್ಣವಾಗಿ ಸಂಬಂಧಪಟ್ಟ ಸಹಾಯಕ ಪ್ರಾಧ್ಯಾಪಕರುಗಳೇ ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತಾರೆ.

v. ಸ್ಥಳೀಯ/ಮಹಾಲೇಖಪಾಲರ ಲೆಕ್ಕಪರಿಶೋಧನೆಗೆ ಒಳಪಡಿಸಿದಾಗ, ಯಾವುದೇ ಅಸಂಗತಗಳು ಕಂಡು ಬಂದಲ್ಲಿ ಮರು ಪರಿಶೀಲಿಸುವ ಮತ್ತು ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

vi. ಸದರಿ ಸಹಾಯಕ ಪ್ರಾಧ್ಯಾಪಕರುಗಳಿಗೆ ಪದೋನ್ನತಿ ವೇತನ ನಿಗದಿಯಲ್ಲಿ ಸರ್ಕಾರ /ಎಐಸಿಟಿಇ ನಿಯಮಗಳನ್ವಯ ಯಾವುದಾದರೂ ಲೋಪದೋಷಗಳು ಕಂಡುಬಂದಲ್ಲಿ ಅಂತಹ ಮುಂಬಡ್ತಿ ಆದೇಶವನ್ನು ರದ್ದುಪಡಿಸಿ ವೇತನ ವ್ಯತ್ಯಾಸದ ಮೊತ್ತವನ್ನು ವಸೂಲು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

vii. ಸಹಾಯಕ ಪ್ರಾಧ್ಯಾಪಕರುಗಳಿಗೆ ಮುಂಬಡ್ತಿ ಮಂಜೂರಾತಿಯ ವಿವರಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಸೇವಾ ಪುಸ್ತಕದಲ್ಲಿ ನಮೂದಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

viii. ಈ ವೃತ್ತಿ ಪದೋನ್ನತಿಯನ್ನು ಸೇವಾ ಜೇಷ್ಟತೆಗೆ ಪರಿಗಣಿಸಲು ಅವಕಾಶವಿರುವುದಿಲ್ಲ.

ix. ಸದರಿಯವರಿಗೆ 7ನೇ ಎಐಸಿಟಿಇ ವೇತನ ಶ್ರೇಣಿಯಡಿ ಪದೋನ್ನತಿಯ ಆರ್ಥಿಕ ಸೌಲಭ್ಯವನ್ನು ಭವಿಷ್ಯವರ್ತಿಯಾಗಿ ಅಂದರೆ, ಈ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ ಜಾರಿಗೊಳಿಸುವುದು.

DIRECTOR | EST-10
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಆಪ್ತ ಶಾಖೆ
ಸಂಖ್ಯೆ 1133
ದಿನಾಂಕ 27 JAN 2025

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

24/01/2025

**(ಮಹಾಂತಪ್ಪ ಎಸ್.ತುರಕನೂರ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

24/01

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಎ&ಇ), ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.

...4

3. ಸಂಬಂಧಪಟ್ಟ ಸಹಾಯಕ ಪ್ರಾಧ್ಯಾಪಕರುಗಳಿಗೆ (ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆರವರ ಕಛೇರಿಯ ಮೂಲಕ)

**ಪ್ರತಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ
2. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 12 ಡಿಟಿಇ 2025, ದಿನಾಂಕ: 24ನೇ ಜನವರಿ 2025ಕ್ಕೆ**

**ಅನುಬಂಧ**

| ಕ್ರ.ಸಂ | ಹೆಸರು, ಪದನಾಮ ಮತ್ತು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ | ಸೇವೆಗೆ ಸೇರಿದ ದಿನಾಂಕ | ಮುಂಬಡ್ತಿಗೆ ಅರ್ಹತೆ ಪಡೆದ ದಿನಾಂಕ |
|---|---|---|---|
| | **ಗ್ರಂಥಾಲಯ ವಿಜ್ಞಾನ** | | |
| 01. | ಡಾ. ಸತ್ಯಶ್ರೀ. ಕೆ. ಎಸ್<br>ಗ್ರಂಥಪಾಲಕರು<br>ಸರ್ಕಾರಿ ಎಸ್‌ಕೆಎಸ್‌ಜೆಟಿಐ,<br>ಬೆಂಗಳೂರು | 08-10-2010 | 08-10-2021 |
| | **ಇಂಗ್ಲೀಷ್ ವಿಭಾಗ** | | |
| 02. | ಸಂಜೀವ್.ಪಿ<br>ಸಹಾಯಕ ಪ್ರಾಧ್ಯಾಪಕರು<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು<br>ಕುಶಾಲನಗರ | 07-03-2011 | 01-03-2023 |
| | **ಗಣಿತ ವಿಭಾಗ** | | |
| 03. | ಡಾ. ಸುಜಾತಾ ತಿಮ್ಮನಾಯ್ಕರ ಸಹಾಯಕ<br>ಪ್ರಾಧ್ಯಾಪಕರು<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು<br>ಹಾವೇರಿ | 31-10-2014 | 01-03-2023 |
| | **ಭೂವಿಜ್ಞಾನ ವಿಭಾಗ** | | |
| 04. | ಡಾ.ಆರ್.ಟಿ.ಸ್ವಾಮಿ<br>ಸಹಾಯಕ ಪ್ರಾಧ್ಯಾಪಕರು<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು<br>ಕೆ.ಆರ್.ಪೇಟೆ | 22-10-2012 | 01-03-2023 |
| | **ರಸಾಯನ ಶಾಸ್ತ್ರ ವಿಭಾಗ** | | |
| 05. | ನಾಗಭೂಷಣ ಎಂ. ಎಂ.<br>ಸಹಾಯಕ ಪ್ರಾಧ್ಯಾಪಕರು<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು<br>ರಾಯಚೂರು | 04-09-2013 | 01-03-2023 |
| 06. | ಲಲಿತಾ.ಡಿ<br>ಸಹಾಯಕ ಪ್ರಾಧ್ಯಾಪಕರು<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು<br>ಹೂವಿನಹಡಗಲಿ | 06-09-2013 | 06-09-2022 |
| | **ಕಾಮಗಾರಿ ವಿಭಾಗ** | | |
| 07. | ದಕ್ಷಿಣಮೂರ್ತಿ.ಎಂ<br>ಸಹಾಯಕ ಪ್ರಾಧ್ಯಾಪಕರು<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು<br>ಕೆ.ಆರ್.ಪೇಟೆ | 06-04-2011 | 06-04-2020 |

...2

| | | | |
|---|---|---|---|
| 08. | ಸುಚಿತಾ ವಾಲಿ<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಎಸ್‌ಕೆಎಸ್‌ಜೆಟಿಐ,<br>ಬೆಂಗಳೂರು | 13-04-2011 | 04-12-2020 |
| | **ದೈಹಿಕ ಶಿಕ್ಷಣ ಮತ್ತು ಕ್ರೀಡೆ** | | |
| 09. | ಡಾ. ತುಳಸಿಮಾಲ.ಕೆ<br>ಸಹಾಯಕ ನಿರ್ದೇಶಕರು<br>ಸರ್ಕಾರಿ ಎಸ್‌ಕೆಎಸ್‌ಜೆಟಿಐ,<br>ಬೆಂಗಳೂರು | 07-04-2015 | 07-04-2024 |
| | **ಗಣಕಯಂತ್ರ ವಿಭಾಗ** | | |
| 10. | ನಿತ್ಯಾನಂದ. ಡಿ. ಎಂ<br>ಸಹಾಯಕ ಪ್ರಾಧ್ಯಾಪಕರು<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು<br>ಹಾವೇರಿ | 07-03-2011 | 07-03-2020 |

24/01/2025

**(ಮಹಾಂತಪ್ಪ ಎಸ್.ತುರಕನೂರ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ)

24/01